ಸೌಂದರ್ಯಕ್ಕೆ ಮರುಳಾಗಿ ಮೈಮರೆತ ಪ್ರಮತಿ ಎಂಬ ತರುಣ ಮುನಿ ನನ್ನನ್ನೇ ಎವೆಯಿಕ್ಕದೇ ನೋಡುತ್ತಿರುವಾಗ ಕಡೆಗಣ್ಣ ನೋಟ ಬೀರಿ ನಾನು ಕೇಳಿದೆ; ‘ಮುನಿಕುಮಾರ, ಏನು ಈ ಪರಿ ಈಕ್ಷೆ? ಯಾರ ಪ್ರತೀಕ್ಷೆ?’ ಆತನೆಂದ: ‘ನೀನು ಅದೆಂಥ ರೂಪಸಿಯೆ ಘೃತಾಚಿ! ನಿನ್ನ ಸೌಂದರ್ಯ ಕಂಡು ನಾನು ಕಳೆದುಕೊಂಡಿದ್ದೇನೆ ತಿತಿಕ್ಷೆ…’ ಎಂದು ನಸುನಕ್ಕ. ಪ್ರಮತಿ ಮುನಿ ಬಹುಸುಂದರನಾಗಿದ್ದ. ಅವನ ಇಂಗಿತ ನನಗೆ ಅರ್ಥವಾಯಿತು. ನನ್ನಲ್ಲಿಯೂ ಉಂಟಾಯಿತು ಅವನನ್ನು ಕೂಡುವ ಅಧಿಕಾಪೇಕ್ಷೆ. ನಾನು ಅವನ ಸುಂದರ ಆಶ್ರಮದ ಸುಂದರ ಪರ್ಣಕುಟಿಗೆ ನಡೆದೆ. ಕೆಲವು ಕಾಲ ತರುಣ ಮುನಿ ಪ್ರಮತಿಯೊಂದಿಗೆ ಸಂಸಾರ ಮಾಡಿದೆ. ನಮ್ಮ ದಾಂಪತ್ಯದ ಫಲವಾಗಿ ರುರು ಎಂಬ ಮುನಿಕುವರ ಜನಿಸಿದ. ಅವನ ಲಾಲನೆ ಪಾಲನೆ ಮಾಡಿ ಪ್ರಮತಿಗೆ ಒಪ್ಪಿಸಿ, ನಮ್ಮ ಊರಿಗೆ ನಾನು ಮರಳಿದೆ. ನಮ್ಮ ದೇವಲೋಕದ ಒಡೆಯ ಇಂದ್ರನ ಆಜ್ಞೆಯಿದೆ; ‘ಬಹಳ ಕಾಲ ಎಲ್ಲಿಯೂ ನಿಲ್ಲಬಾರದು. ನಿಮ್ಮ ವಿಹಾರಸುಖ, ಸುರತಾಪೇಕ್ಷೆ ಮತ್ತು ಮೂಲ ಉದ್ದೇಶ ಪೂರ್ಣವಾದೊಡನೆಯೇ ಊರಿಗೆ ಮರಳಬೇಕು’ ಎಂದು.



ಹೌದು, ದೇವಲೋಕಕ್ಕೆ ಹಿಂದಿರುಗಿದ ಕೆಲವೇ ದಿನಗಳಲ್ಲಿ ಒಂದು ಅನಿರೀಕ್ಷಿತ ಘಟನೆ ನಡೆದುಹೋಯಿತು. ಅದು ನನ್ನ ಜೀವನದ ತಿರುವು ಎನ್ನಬಹುದು. ದೇವಲೋಕದ ಶಿಲ್ಪಿ ವಿಶ್ವಕರ್ಮ ನನ್ನನ್ನು ಮೋಹಿಸಿ, ನನ್ನ ಹಿಂದೆ ಬಿದ್ದಿದ್ದನಲ್ಲ. ನಾವು ದೇವಗಣಿಕೆಯರಾದರೂ ಯಾರು ಕರೆದರೂ ಹೋಗಿಬಿಡುವ ಕೀಳುಮಟ್ಟದ ಚಾರಿತ್ರ್ಯ ಹೊಂದಿದವರಲ್ಲ. ದೇವರೂರಿನ ಒಳಿತಿಗಾಗಿ ಇಂದ್ರನ ಅಪ್ಪಣೆಯಾಗಬೇಕು, ಇಲ್ಲ ನಮಗೆ ಇಷ್ಟವಾಗಬೇಕು. ಪುರುಷಾಪೇಕ್ಷೆಯುಂಟಾಗಿ, ಅವರನ್ನು ನಾವೂ ಮೆಚ್ಚಬೇಕು. ಪರಸ್ಪರ ಒಲಿದು ಒಂದಾದ ಮಧುರ ಕ್ಷಣದ ‘ಮಿಲನೋತ್ಸವವೇ’ ಬೇರೆ. ಬಲವಂತದ ಕೂಡಿಕೆಯೇ ಬೇರೆ. ಅತ್ಯಾಚಾರಕ್ಕೆಳಸಿದರೆ ನಾವೂ ಶಪಿಸುವವರೇ. ಶಿಕ್ಷೆ ನೀಡುವವರೇ. ವಿಶ್ವಕರ್ಮ ಅತಿಯಾಗಿ ಪೀಡಿಸತೊಡಗಿದಾಗ ನಾನು ಖಡಾಖಂಡಿತವಾಗಿ ಹೇಳಿದೆ: ‘ನೀನು ಸುಂದರವಾದ ಸೌಧಗಳನ್ನು ನಿರ್ಮಿಸಬಹುದು. ಶಿಲಾಬಾಲಿಕೆಯರನ್ನು ಕಟೆದಿರಬಹುದು. ಆದರೆ ಜೀವಂತ ತರುಣಿಯರೊಂದಿಗೆ ಕಟ್ಟುವ ಪ್ರೇಮಸೌಧವೇ ಬೇರೆ; ಒಲಿಸಿಕೊಳ್ಳುವ ಕಲೆಯೇ ಬೇರೆ’ ಎಂದು. ಅವನನ್ನು ತಿರಸ್ಕರಿಸಿದೆ. ಇದರಿಂದ ಕುಪಿತಗೊಂಡ ಆತ ‘ನೀನು ಭೂಲೋಕದಲ್ಲಿ ಹೋಗಿ ಜನಿಸು’ ಎಂದು ನನಗೆ ಶಾಪವಿತ್ತ.

ಈ ಪುರುಷ ಪ್ರಪಂಚವೇ ಹೀಗೆಯೆ? ಅವರು ಬೇಕೆಂದರೆ ನಾವು ಅವರಿಗೆ ಸಿಗಬೇಕೆ? ತಿರಸ್ಕರಿಸಿದರೆ ಅತ್ಯಾಚಾರ ಇಲ್ಲವೆ ಶಾಪ? ಇದೆಂಥ ರೀತಿ, ಇದಾವ ನೀತಿ? ತಡಮಾಡಲಿಲ್ಲ, ನಾನೂ ಶಪಿಸಿದೆ; ನೀನೂ ಭೂಲೋಕದಲ್ಲಿ ಹೋಗಿ ಜನಿಸು ಎಂದು. ಫಲಿತಾಂಶ? ಇದು ವಿಧಿಯು ಬರೆದ ‘ಬರಹ’ವೇ ಇರಬೇಕು. ಸೃಷ್ಟಿಯ ನಿಯಮಕ್ಕನುಸಾರ ಆತ ಬಯಸಿದ ಭವಿಷ್ಯವೇ ಆಗಿರಬೇಕು. ನಾನು ಯೋಚಿಸಿದೆ; ‘ಇದು ಒಳ್ಳೆಯದೇ ಆಯಿತು. ಇತ್ತೀಚೆಗೆ ನನ್ನಲ್ಲಿ ಮನುಷ್ಯರಂತೆ ಭೂಲೋಕದಲ್ಲಿ ಸಂಸಾರ ಮಾಡಬೇಕು. ಮಕ್ಕಳು ಮೊಮ್ಮಕ್ಕಳೊಂದಿಗೆ ಸುಖ ಅನುಭವಿಸಬೇಕು ಎಂಬ ಉತ್ಕಟೇಚ್ಛೆ ಉಂಟಾಗುತ್ತಿತ್ತು. ಹೀಗೇ ಅಲೆಮಾರಿಯಂತೆ ವಿಹಾರ ಮಾಡುತ್ತ, ಯಾರು ಯಾರೊಂದಿಗೊ ಸುರತಕ್ರೀಡೆಯಲ್ಲಿ ತೊಡಗಿರುತ್ತ, ಅವರ ಸುಖಕ್ಕೇ ಹೆಚ್ಚು ಪ್ರಾಧಾನ್ಯಕೊಡುವ ಬದುಕಿನಿಂದ ಕೊಂಚ ಭಿನ್ನವಾದ ಬದುಕನ್ನೂ ಬಾಳಿನೋಡೋಣ. ದೀರ್ಘಕಾಲ ದಾಂಪತ್ಯ ಸುಖ ಅನುಭವಿಸೋಣ’ ಎಂಬ ಆಸೆ ಮೊಳಕೆಯೊಡೆದು, ಗಟ್ಟಿಗೊಳ್ಳುತ್ತಿರುವ ಸಂದರ್ಭದಲ್ಲೇ ಈ ಘಟನೆ ನಡೆಯಿತು. ಅದನ್ನು ಸಕಾರಾತ್ಮಕವಾಗಿ ಬಳಸಿಕೊಳ್ಳಲು ನಾನು ನಿರ್ಧರಿಸಿದೆ. ಅಂತೆಯೇ ನಾನು ಪ್ರಯಾಗದಲ್ಲಿ ಓರ್ವ ಗೊಲ್ಲನ ಮಗಳಾಗಿ ಹುಟ್ಟಿದೆ.

ವಿಶ್ವಕರ್ಮನೂ ಪ್ರಯಾಗಕ್ಕೆ ಹೊಂದಿಕೊಂಡೇ ಇರುವ ಜನಪದವೊಂದರಲ್ಲಿ ಜನ್ಮ ತಾಳಿದ. ತಾರುಣ್ಯಕ್ಕೆ ಕಾಲಿಡುತ್ತಿದ್ದಂತೆ ತ್ರಿವೇಣಿ ಸಂಗಮ ಜಾತ್ರೆಯಲ್ಲಿ ನಾನು ಅವನನ್ನು ಕಂಡೆ. ಆತ ನನ್ನನ್ನು ನೋಡಿದ. ಚಲುವನಿವನಾರೆ? ಸಖಿಯರ ಬಳಿ ನಾನು ಕೇಳಿದೆ. ಯಾರೀಕೆ ವಿಶ್ವಸುಂದರಿ? ಎಂದು ಗೆಳೆಯರ ಬಳಿ ಅವನು ಕೇಳಿದನಂತೆ.

ತರುಣತರುಣಿಯರುಪರಸ್ಪರನೋಡಿದರೆಂದರೆ, ನಾಲ್ಕು ಕಣ್ಣುಗಳ ಮಿಲನವಾಯಿತೆಂದರೆ, ಇಬ್ಬರೂ ಆಕರ್ಷಿತರಾದರೆಂದರೆ, ಅಲ್ಲಿ ಮಿಲನೋತ್ಸವಕ್ಕೆ ಬಾಗಿಲು ತೆರೆಯಿತೆಂದೇ ಅರ್ಥವಲ್ಲವೆ? ಅದೇನು ಯೋಗಾಯೋಗವೊ? ನನಗೆ ಅಚ್ಚರಿಯಾಗುತ್ತದೆ; ನಾನು ಘೃತಾಚಿಯಾಗಿದ್ದಾಗ ತಿರಸ್ಕರಿಸಿದ ವಿಶ್ವಕರ್ಮನನ್ನೇ ಈಗ ನಾನು ಗೊಲ್ಲರ ತರುಣಿಯಾದಾಗ ಅವನನ್ನು ಮೋಹಿಸಿದೆನಲ್ಲ! ಆತ ಕಮ್ಮಾರ ಕುಮಾರನಾಗಿ ಜನ್ಮತಾಳಿದ್ದ. ನಿಳಿದೋಳು ಚಾಚಿ ‘ಬಾ’ ಎಂದು ಕರೆದಿದ್ದ. ಪರಸ್ಪರ ಆಕರ್ಷಿತರಾಗಿ ಒಂದಾಗಲು ಬಯಸಿದೆವು. ಹೌದು, ಸಂಸಾರಸ್ಥರಾಗಿ, ಗೌರವಯುತ ಜೀವನ ನಡೆಸಲು ನಾವು ಪ್ರೇಮ ವಿವಾಹವಾಗಿ ದಾಂಪತ್ಯಕ್ಕೆ ಕಾಲಿಡಲು ಇಚ್ಛೆಪಟ್ಟೆವು.

ನಮ್ಮ ಜಾತಿ ಬೇರೆ ಬೇರೆ. ಆದರೂ ಅಂತರ್ಜಾತೀಯ ವಿವಾಹಕ್ಕೆ ಯಾವ ಅಡ್ಡಿ ಆತಂಕವೂ ಬರಲಿಲ್ಲ. ವಿಶ್ವಕರ್ಮನೊಂದಿಗೆ ನನ್ನ ಮದುವೆಯಾಯಿತು. ನಾವು ಗಾಢವಾಗಿ ಪ್ರೀತಿಸಿದೆವು. ಸಂಸಾರ ನಡೆಸಿದೆವು. ಅದೆಷ್ಟು ಕಾಲ ನಾವು ದಾಂಪತ್ಯ ಜೀವನ ನಡೆಸಿದೆವು! ಅನ್ಯೋನ್ಯವಾಗಿ, ಸುಖ ಸಂತೋಷದಿಂದ. ಭೂಲೋಕದಲ್ಲಿ ಇದೇ ನನ್ನ ಕೊನೆಯ ವಾಸವೂ ಹೌದು. ಸುದೀರ್ಘ ದಾಂಪತ್ಯ ಜೀವನವೂ ಹೌದು. ನಮಗೆ ಅನೇಕ ಮಕ್ಕಳು. ಆಗೆಲ್ಲ ಹಾಗೆಯೇ ತಾನೆ. ಮನೆ ತುಂಬ ಮಕ್ಕಳು! ಇಂದು ನಾನು ದೇವಲೋಕದಿಂದಲೇ ನೋಡುತ್ತೇನೆ; ನಿರುಕಿಸುತ್ತೇನೆ, ಮತ್ತು ಕಣ್ತುಂಬಿಕೊಳ್ಳುತ್ತೇನೆ. ನಮ್ಮ ಕುಲ ಈಗ ಆಲದ ಮರದಂತೆ ವಿಸ್ತಾರಗೊಂಡಿದೆ. ರೆಂಬೆ ಕೊಂಬೆಗಳು, ಬಿಳಲುಗಳು ದೂರ ದೂರಕ್ಕೆ ಚಾಚಿವೆ. ಆಶ್ರಯದ ಆಲಯವಾಗಿ ನೆಲೆಯಾಗಿ ಬೇರೂರಿ ನಿಂತಿದೆ. ಬಡಗಿಗಳು, ಕಮ್ಮಾರರು, ಅಕ್ಕಸಾಲಿಗಳು ಎಂದು ಮುಂತಾಗಿ ಅನೇಕ ಬಗೆಯಲ್ಲಿ ನಮ್ಮ ವಂಶದವರನ್ನು ಕರೆಯುತ್ತಾರೆ. ತಾಯ್ತನದ ಸಂತೃಪ್ತಭಾವ ನನ್ನದಾಗುತ್ತದೆ. ವಂಶವೃಕ್ಷ ಬೆಳೆದು ನಿಂತ ದೃಶ್ಯ ಕಂಡು ಏನೋ ಅನಿರ್ವಚನೀಯವಾದ ಧನ್ಯತೆಯನ್ನು ಅನುಭವಿಸುತ್ತೇನೆ.

ಪ್ರತಿಕ್ರಿಯಿಸಿ: **feedback@sudha.co.in**